ಕರ್ನಾಟಕ ವಿಧಾನಸಭೆ

ಗುರುವಾರ 19ನೇ ಜುಲೈ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ಎಂ.ವಿ.ಪೆಂಕಟಪ್ಪ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷರು: ಮಾನ್ಯ ಚೌಡರೆಡ್ಡಿಯವರ ಪ್ರಶ್ನೆಗೆ ಸಮಾಜಕಲ್ಯಾಣ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರ ಕೊಡಬೇಕಾಗಿತ್ತು ಅವರು ವಿದೇಶಕ್ಕೆ ಹೋಗಿದ್ದಾರೆ, ಇನ್ನೂ ಮೂರ್ನಾಲ್ಕು ದಿವಸಗಳು ಅವರು ಬರುವುದಿಲ್ಲ. ಅವರ ಹೆಸರಿನಲ್ಲಿರುವಂತಹ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಅವರ ಪರವಾಗಿ ಯಾರಾದರೂ ಉತ್ತರವನ್ನು ಕೊಡಬಹುದಾಗಿತ್ತು. ಅವರು ವಿದೇಶಕ್ಕೆ ಹೋಗುವ ಕಾರ್ಯಕ್ರಮ ಮೊದಲೇ ಫಿಕ್ಸ್ ಆಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಸಂಸದೀಯ ನಡವಳಿಕೆಗಳಲ್ಲಿ ನಮ್ಮ ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಮಂತ್ರಿಮಂಡಲದ ಸದಸ್ಯರು ಯಾರು ಬೇಕಾದರೂ ಉತ್ತರವನ್ನು ಕೊಡಬಹುದು. ವಿಧಾನಸಭೆಯ ಅಧಿವೇಶನ ನಡೆಯುವಾಗ ಮಂತ್ರಿಗಳು ವಿದೇಶಕ್ಕೆ ಹೋಗಲೇಬಾರದು.

ಅಧ್ಯಕ್ಷರು: ಸರ್ಕಾರಕ್ಕೆ ಲಾಭವಿರುವುದರಿಂದ ಅವರು ವಿದೇಶಕ್ಕೆ ಹೋಗಿರಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರು ವಿದೇಶದಿಂದ ಬಂದ ನಂತರ ನೋಡೋಣ, 2 ವರ್ಷಗಳಿಂದ ಲಾಭ-ಲಾಭವೆಂದು ಹೇಳಿಕೊಂಡೇ ಬರುತ್ತಿದ್ದಾರೆ, ನಷ್ಟ ಆಗುತ್ತಲೇ ಇದೆ. ಅದು ಬೇರೆ ನಾನು ಕೇಳುತ್ತಿರುವುದು ಇಷ್ಟೆ ಇಲಾಖೆಗೆ ಒಬ್ಬ ಕಾರ್ಯದರ್ಶಿಯವರು ಇರುತ್ತಾರೆ. ನಾವು ಪ್ರಶ್ನೆ ಕೇಳುವ ಉದ್ದೇಶವೇನು? ಕೆಳಮಟ್ಟದಲ್ಲಿ ಸರ್ಕಾರ ಕೆಲಸ ಮಾಡಬೇಕು. ತಾವು ಈಗ ಏನು ಮಾಡುತ್ತೀರೆಂದರೆ ಈ ಪ್ರಶ್ನೆಗಳನ್ನು ಮುಂದಕ್ಕೆ ಹಾಕುತ್ತೀರಿ. ತಾವು ಹೇಳುವ ಪ್ರಕಾರ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ, ಆದರೆ ಮಹತ್ವ ಹೋಗುತ್ತದೆ. ಇವತ್ತು ಪೂರ್ತಿ ಸಮಾಜಕಲ್ಯಾಣ ಸಚಿವರ ಪ್ರಶ್ನೆಗಳೇ ಇರುತ್ತವೆ.

ಅಧ್ಯಕ್ಷರು: ಮಾನ್ಯ ಕಾಗೋಡು ತಿಮ್ಮಪ್ಪನವರು ಮಾನ್ಯ ಧರ್ಮಸಿಂಗ್‌ರವರಿಗೆ

ಹೇಳಿ ಹೋಗಿದ್ದರು, ಅವರ ಬ್ರದರ್ ಇನ್‌ಲಾ ತೀರಿಕೊಂಡಿರುವುದರಿಂದ ಅವರು ಸೋಲಾಪುರಕ್ಕೆ ಹೋಗಿರುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಧರ್ಮಸಿಂಗ್‌ರವರ ಬ್ರದರ್ ಇನ್‌ಲಾ ತೀರಿಕೊಂಡಿರುವುದಕ್ಕೆ ಶಾಸಕರ ಸಿಂಪತಿ ಇದೆ. ಅದಕ್ಕಾಗಿ ನಾವು ಒಂದು ಕಂಡೋಲೆನ್ಸ್ ಮಾಡೋಣ. ಸಮಾಜಕಲ್ಯಾಣ ಸಚಿವರು ವಿದೇಶಕ್ಕೆ ಯಾವ ಕಾರಣಕ್ಕಾಗಿ ಹೋಗಿರುತ್ತಾರೆ?

We have all sympathy for him and we express our condolence through this House. But this House has not been informed. Whether the Social Welfare Minister has gone on Government work or pleasure trip?

MR. SPEAKER: Not on pleasure trip.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಅಪರೂಪಕ್ಕೆ ನನ್ನದು ಒಂದು ಪ್ರಶ್ನೆ ಬಂದಿದೆ. ಇಂತಹ ಸಂದರ್ಭದಲ್ಲಿ ಬೇರೆ ಮಂತ್ರಿಗಳು ಉತ್ತರವನ್ನು ಕೊಡುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಕಾಗೋಡು ತಿಮ್ಮಪ್ಪನವರು ನನಗೆ ಬರೆದಿರುವ ಪತ್ರವನ್ನು ಓದುತ್ತೇನೆ ನೋಡಿ. ''ದಿನಾಂಕ:18-7-2001 ರಿಂದ ದಿನಾಂಕ: 23-7-2001ರವರೆಗೆ ಮೇಡ್ ಇನ್ ಇಂಡಿಯಾ ಷೋದಲ್ಲಿ ಭಾಗವಹಿಸಲು ಸರ್ಕಾರದ ಪರವಾಗಿ ಜೋಹಾನ್ಸ್‌ಬರ್ಗ್ ಹಾಗೂ ದಕ್ಷಿಣ ಆಫ್ರಿಕಾಕ್ಕೆ ಪ್ರವಾಸವನ್ನು ಕೈಗೊಳ್ಳಲಿದ್ದೇನೆ. ದೈನಂದಿನ ಕಾರ್ಯಕ್ರಮವಾದ ವಿಧಾನಸಭೆಯ ಅಧಿವೇಶನದಲ್ಲಿ ಭಾಗವಹಿಸಲು ಅಸಾಧ್ಯವಾಗಿದೆ, ಆದ್ದರಿಂದ ಆ ಸಮಯದಲ್ಲಿ ಬರುವಂತಹ ಪ್ರಶ್ನೆಗಳಿಗೆ ಉತ್ತರಿಸಲು ಲೋಕೋಪಯೋಗಿ ಸಚಿವರಿಗೆ ಏನಂತಿಸಕೊಂಡಿದ್ದು ನನ್ನ ಪರವಾಗಿ ಅವರು ಉತ್ತರಿಸುತ್ತಾರೆಂದು ತಿಳಿಸಿರುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಮ್ಮಲ್ಲಿ ನನ್ನದು ಒಂದು ವಿನಂತಿ ಏನೆಂದರೆ, ಸದನ ನಡೆಯತಕ್ಕಂತಹ ಸಂದರ್ಭದಲ್ಲಿ ಮಂತ್ರಿಗಳು ವಿದೇಶಕ್ಕೆ ಹೋಗುವುದನ್ನು ನಾವು ತೀವ್ರವಾಗಿ ಆಕ್ಷೇಪಿಸುತ್ತೇವೆ. ತಾವು ಎಷ್ಟು ದೊಡ್ಡ ಮನುಷ್ಯರು ಎಂದು ಹೇಳುತ್ತೇನೆ, ನಾನು ನಿಮ್ಮನ್ನು ಅಪ್ರೀಷಿಯೇಟ್ ಮಾಡುತ್ತೇನೆ, ತಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ನೀವು ನಮಗೆ ಪತ್ರವನ್ನು ಬರೆದು ಇಂತಹ ದಿನಾಂಕಕ್ಕೆ ನಿಮ್ಮ ಪ್ರಶ್ನೆ ಸದನದಲ್ಲಿ ಬರುತ್ತಿದ್ದು ಆ ಸಮಯದಲ್ಲಿ ನೀವು ಹಾಜರಾಗಿರಬೇಕೆಂದು ನಿಮ್ಮ

ಕಾರ್ಯದರ್ಶಿಯವರ ಮುಖಾಂತರ ಪತ್ರವನ್ನು ಬರೆದು ತಿಳಿಸುತ್ತೀರಿ. ಇವರು ಹೋಗಿರುವ ಮೇಡ್-ಇನ್-ಇಂಡಿಯಾ ಷೋ ಏನಿದು, ಅದು ಪ್ರದರ್ಶನವೇ ಅಥವಾ ಫೇರಾ?

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಬೇಕಾಗಿಯೇ ಇದನ್ನು ಮಾಡಿರುವುದಿಲ್ಲ, ಇವರೊಬ್ಬರ ಸಲುವಾಗಿ ಅಲ್ಲಿ ನಡೆಯುವ ಕಾನ್ಫರೆನ್ಸ್‌ನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ. ತಾವು ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಇವರು ಸದನ ನಡೆಯುವಾಗ ವಿದೇಶಕ್ಕೆ ಹೋಗಿದ್ದಾರೆ. This has not given its sanction for it. ಇದಕ್ಕೆ ನಮ್ಮ ತೀವ್ರವಾದ ಆಕ್ಷೇಪವಿರುತ್ತದೆ.

ಅಧ್ಯಕ್ಷರು: ವಿಧಾನಪರಿಷತ್ ನಡೆಯುವಾಗ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಪ್ರವಾಸ ಹೋಗಬೇಕೆಂದು ನಾನು ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ಒಂದು ಪತ್ರವನ್ನು ಬರೆಯಿರಿ, ಈ ಸದನದಲ್ಲಿ ನಿಮಗೆ ಪರಮಾಧಿಕಾರವಿರುತ್ತದೆ. ನಿಮ್ಮ ಅಧಿಕಾರವನ್ನು ಬೇರೆಯವರಿಗೆ ನೀವು ಏಕೆ ಬಿಟ್ಟು ಕೊಡುತ್ತೀರಿ? You are the final authority of this House. You are not at the mercy of the Government. They are under your mercy.

ಅಧ್ಯಕ್ಷರು: ಆಕಸ್ಮಾತ್ತಾಗಿ ಸರ್ಕಾರಕ್ಕೆ 100 ಕೋಟಿ ರೂಪಾಯಿಗಳು ಲಾಭ ಬರುವುದಾದರೆ ಏಕೆ ಹೋಗಬಾರದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರು ಏತಕ್ಕಾಗಿ ಹೋಗಿದ್ದಾರೆಂಬುದು ನಮಗೆ ಗೊತ್ತಿದೆ ಬಿಡಿ. ಮಾನ್ಯ ಸಚಿವರು ವಿದೇಶಕ್ಕೆ ಹೋಗುವುದಕ್ಕೆ ಪರವಾನಗಿಯನ್ನು ಕೊಡಬಾರದು. ಮಾನ್ಯ ಬಚ್ಚೇಗೌಡರೇ, ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಭಾಷಣ ಮಾಡಿದ್ದಾರೆ, ಜನತಾದಳದ ಮಂತ್ರಿಗಳು ಮೈತ್ರಿಕೂಟವನ್ನು ತೀರಿಸಿಕೊಳ್ಳಲು ವಿದೇಶಕ್ಕೆ ಹೋಗಿದ್ದಾರೆಂದು ಅವರು ಕೇಳಿದ್ದಾರೆ. ಅದರಿಂದಾಗಿ ನಾನು ಹೇಳುತ್ತಿದ್ದೇನೆ, ಇವರು ಯಾರ ತೀಟೆಯನ್ನು ತೀರಿಸಿಕೊಳ್ಳಲು ಇವತ್ತು ವಿದೇಶಕ್ಕೆ ಹೋಗಿದ್ದಾರೆ? ಸದನ ನಡೆಯುವಾಗ ಅವರು ಇಲ್ಲಿ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು: ಅನಿವಾರ್ಯವಾಗಿ ಹೋಗಿರುತ್ತಾರೆ, ಅದರ ಬಗ್ಗೆ ನಾನು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನ ನಡೆಯುವಾಗ ಮಂತ್ರಿಗಳು ವಿದೇಶಕ್ಕೆ ಹೋಗುವುದು ಸರಿಯಲ್ಲ. ನಮ್ಮ ಪ್ರಶ್ನೆಗಳಿಗೆ ನೀವು ಯಾವಾಗ ಉತ್ತರವನ್ನು ಕೊಡಿಸುತ್ತೀರಿ?

ಅಧ್ಯಕ್ಷರು: ನಿಮ್ಮ ಪ್ರಶ್ನೆಗಳನ್ನು ಲ್ಯಾಪ್ಸ್ ಆಗದಂತೆ ನೋಡಿಕೊಳ್ಳುತ್ತೇನೆ. ಈ ಸದನ ಮುಗಿಯುವುದರೊಳಗಾಗಿ ನಿಮಗೆ ಉತ್ತರವನ್ನು ಕೊಡಿಸುತ್ತೇನೆ, ಅದು ನನ್ನ ಜವಾಬ್ದಾರಿಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲದಿದ್ದರೆ ಬೇರೆ ಮಂತ್ರಿಗಳಿಂದಲಾದರೂ ಸರ್ಕಾರದ ಪರವಾಗಿ ಉತ್ತರವನ್ನು ಕೊಡಿಸುವಂಥ ಕೆಲಸ ಆಗಬೇಕಾಗಿತ್ತು.